ಶ್ರೀ ಎನ್. ರಾಚಯ್ಯ.—ಮೊದಲೇ ಇಲ್ಲಿ ರಾಜ್ಯ ಸರಕಾರ ಸ್ಪೆಷಲ್ ಲಾಂಗ್ ಟರ್ಮ್ ಫೈನಾನ್ಸಿಂಗ್ ಇಟ್ಟುಕೊಂಡಿರುತ್ತಾರೆ. ಈ ವಿಚಾರದಲ್ಲಿ ಸರಕಾರದವರು ಎಲ್ಲಾ ತಾಲ್ಲೂಕುಗಳನ್ನು ಸರ್ವೆ ಮಾಡಿ ಇದ್ದಾರಲ್ಲಿ ಈ ಮೂರು ತಾಲ್ಲೂಕುಗಳು ಬೇರೆ ತಾಲ್ಲೂಕುಗಳಿಗಿಂತ ಎಲ್ಲಾ ವಿಷಯಗಳಲ್ಲೂ ಕೂಡ ಸ್ವಲ್ಪ ಉತ್ತಮ ಪರಿಸ್ಥಿತಿಯಲ್ಲಿವೆ. ಪಂಚವಾರ್ಷಿಕ ಯೋಜನೆ ಮುಂದುವರಿಸಿದರೆ, ಈ ಮೂರು ತಾಲ್ಲೂಕುಗಳೂ ಕೂಡ ಈ ಪಂಚವಾರ್ಷಿಕ ಯೋಜನೆಯಲ್ಲಿ ಬರುವುದಕ್ಕೆ ಅವಕಾಶ ಇದೆ. ಬೇರೆ ಯೋಜನೆಗಳನ್ನೂ ಈ ತಾಲ್ಲೂಕುಗಳಿಗೆ ಹಾಕುವುದಕ್ಕೆ ಅವಕಾಶವಿದೆ.

ಶ್ರೀ ಎ. ಎ. ಮುನಿಸ್ವಾಮಿ.—ಮೇಜರ್; ಮೀಡಿಯಂ ಇರಿಗೇಷನ್ ಸ್ಕೀಂ ಎಂದು ಹೇಳುತ್ತೀರಿ. ಇಲ್ಲಿ ಎಷ್ಟೆಷ್ಟು ಮೇಜರ್ ಇರಿಗೇಷನ್ ಮತ್ತು ಮೀಡಿಯಂ ಇರಿಗೇಷನ್ ಸ್ಕೀಮ್ ಇವೆ.

ಶ್ರೀ ಎನ್. ರಾಚಯ್ಯ.—ಸರ್ವೆ ಮಾಡಿದ ಅಂಕಿ-ಅಂಶಗಳು ಇವೆ. ಬೇರೆ ಪ್ರಶ್ನೆ ಹಾಕಿದರೆ, ಉತ್ತರ ಕೊಡುತ್ತೇನೆ.

MADAM SPEKER.—The Hon'ble Minister for Co-operation has written to me that he is not well. Therefore, his Questions No; 65 and 1973 will be held-over again.

## ಅಲ್ಪಕಾಲಾವಧಿ ಪ್ರಶ್ನೋತ್ತರ

### ವಿಧಾನ ಸಭೆಯ ಕಾರ್ಯಕಲಾಪ ಇತ್ಯಾದಿಗಳ ಮುದ್ರಣ

42 ಶ್ರೀ ಬಿ. ಜಿ. ಬಣಕಾರ್ (ಹಿರೇಕೆರೂರು).—ಶಿಕ್ಷಣ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :—

(ಅ) 1973 ನೇ ಸಾಲಿನಲ್ಲಿ ಜರುಗಿದ ಮೂರು ಮತ್ತು ನಾಲ್ಕನೆಯ ಅಧಿವೇಶನದಲ್ಲಿ ಜರುಗಿದ ಯಾವತ್ತೂ ಕಾರ್ಯಕಲಾಪಗಳನ್ನು ಸರ್ಕಾರಿ ಮುದ್ರಣಾಲಯದವರು ಮುದ್ರಿಸಿದೇ ಇರುವುದು ಹಾಗೂ ಇವುಗಳನ್ನು ವಿಧಾನ ಸಭಾ ಸದಸ್ಯರುಗಳಿಗೆ ಒದಗಿಸದಿರುವುದು ಇದರಿಂದಾಗಿ ಸದಸ್ಯರಿಗೆ ಬಹಳ ಅನಾನುಕೂಲವಾಗಿದೆಯೆಂಬುದು ಗೊತ್ತಿದೆಯೇ;

(ಆ) ಪ್ರತಿ ವರ್ಷವೂ ಈ ಹಿಂದೆ ಮೈಸೂರು ಶಾಸನಗಳು (ಮೈಸೂರು ಆಕ್ಟ್ಸ್) ಎನ್ನುವ ಆಯಾ ವರ್ಷಗಳಲ್ಲಿ ಪಾಸು ಆಗಿ ಜಾರಿಗೆ ಬರಲ್ಪಟ್ಟ ಎಲ್ಲಾ ಶಾಸನಗಳನ್ನು ಒಂದೇ ಹೊತ್ತಿಗೆಯಲ್ಲಿ ಸೇರಿಸಿ ಸರಕಾರಿ ಮುದ್ರಣಾಲಯವು ಪ್ರಕಟಿಸಿ ಸಾರ್ವಜನಿಕರಿಗೆ ಕಾಯ್ದೆ ಪಂಡಿತರಿಗೆ ಹಾಗೂ ಶಾಸಕರಿಗೆ ಅನುಕೂಲ ಮಾಡಿಕೊಡುತ್ತಿತ್ತು ಮತ್ತು ಈಗ ಇಂತಹ "ಕರ್ನಾಟಕದ ಶಾಸನಗಳು" ಎಂಬ ಪೊತ್ತಿಗೆಯನ್ನು ಪ್ರಕಟಿಸದೆ ಅನಾನುಕೂಲಕ್ಕೆ ಕಾರಣವಾಗಿದೆಯೆಂಬ ವಿಚಾರ ಗೊತ್ತಿದೆಯೇ ;

(ಇ) ಹಾಗಿದ್ದಲ್ಲಿ, ಸರಕಾರಿ ಮುದ್ರಣಾಲಯವು ತ್ವರಿತವಾಗಿ ಸಕಾಲದಲ್ಲಿ ಶಾಸಕರಿಗೆ ಹಾಗೂ ಇತರರಿಗೆ ಮೇಲ್ಕಂಡ ಪ್ರಕಟಣೆಗಳು ಸಿಗುವಂತೆ ಕಾರ್ಯಕ್ರಮ ತೆಗೆದುಕೊಳ್ಳಲು ಸರ್ಕಾರದವರು ಯಾವ ಕಾರ್ಯಕ್ರಮ ತೆಗೆದುಕೊಳ್ಳುವರು ;

(ಈ) ಬೇರೆ ಬೇರೆ ರಾಜ್ಯಗಳಲ್ಲಿ ವಿಧಾನ ಮಂಡಲಗಳ ಅಧಿವೇಶನ ಮುಗಿದ ಒಂದು ಅಥವಾ ಎರಡು ತಿಂಗಳ ಅವಧಿಯಲ್ಲಿಯೇ ಜರುಗಿದ ಕಾರ್ಯಕಲಾಪಗಳನ್ನು ಮುದ್ರಿಸಿ ಅವಶ್ಯಕತೆಯನ್ನಾಗಿ ಸದಸ್ಯರಿಗೆ ಪೂರೈಸಲಾಗುತ್ತಿದೆ ಎಂಬುದು ಸರ್ಕಾರದವರಿಗೆ ಗೊತ್ತಿದೆಯೇ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ (ಶಿಕ್ಷಣ ಶಾಖೆಯ ಮಂತ್ರಿಗಳು).—

ಉತ್ತರ.—(ಅ) 1973 ನೇ ಸಾಲಿನ 16 ದಿನಗಳ ಕಾರ್ಯಕಲಾಪಗಳನ್ನು ಅಚ್ಚು ಮಾಡಿ ಈಗಾಗಲೇ ಸದಸ್ಯರಿಗೆ ಒದಗಿಸಲಾಗಿದೆ. 30 ದಿನಗಳ ಕಾರ್ಯಕಲಾಪಗಳು ಈಗ ಮುದ್ರಣಾಲಯದಲ್ಲಿ ಅಚ್ಚಾಗುತ್ತಿವೆ. ಉಳಿದ 51 ದಿನಗಳ ಕಾರ್ಯಕಲಾಪಗಳನ್ನು ಬೇಗ ಮುದ್ರಿಸಿ ಒದಗಿಸಲು ಏರ್ಪಾಟು ಮಾಡಲಾಗಿದೆ.

(ಅ) 1970-71ರ ಮೈಸೂರು ಶಾಸನಗಳ ಹೊತ್ತಿಗೆಯನ್ನು ಈಗಾಗಲೇ ಮಾರಾಟಕ್ಕೆ ಇಡ ರಾಗಿದೆ. 1972ರ ಶಾಸನಗಳ ಹೊತ್ತಿಗೆಯನ್ನು ಸರ್ಕಾರದ ನ್ಯಾಯಾಂಗ ಇಲಾಖೆಗೆ ಕರಡು ಪ್ರತಿ ಪರಿಷ್ಕರಣಕ್ಕಾಗಿ ಕಳುಹಿಸಲಾಗಿದೆ. 1973ರ ಶಾಸನಗಳ ಹೊತ್ತಿಗೆಯ ಕರಡು ಪ್ರತಿಗಳನ್ನು ಮುಂದಿನ ಒಂದೆರಡು ದಿನಗಳಲ್ಲೇ ನ್ಯಾಯಾಂಗ ಪರಿಷ್ಕರಣೆಗೆ ಕಳುಹಿಸಲಾಗುವುದು. ಅನಂತರ ಅಚ್ಚು ಮಾಡಿ ಅವನ್ನೂ ಮಾರಾಟಕ್ಕಿಡಲಾಗುವುದು.

(ಇ) ಸುವಾರು ಆರು-ಏಳು ತಿಂಗಳುಗಳಿಂದ ಕಾಗದದ ತೀವ್ರ ಅಭಾವವಿದ್ದುದರಿಂದ ವಿಳಂಬ ಅನಿವಾರ್ಯವಾಯಿತು. ಈ ಸಮಸ್ಯೆಯನ್ನು ಪರಿಹರಿಸಲು ಈಗಾಗಲೇ ಸೂಕ್ತ ಕ್ರಮ ತೆಗೆದುಕೊಳ್ಳಲಾಗಿದೆ.

(ಈ) ಇಲ್ಲ.

ಇಲ್ಲಯೂ ಇಂಥ ವ್ಯವಸ್ಥೆ ಮಾಡಲಾಗಿದೆ.

ಶ್ರೀ ಬಿ. ಜಿ. ಬಣಕಾರ್.—1970—71 ನೇ ಇಸವಿಯ ಆಕ್ಟ್ಸ್ ಮತ್ತು ರೂಲ್ಸ್ ಪುಸ್ತಕ ವನ್ನು 1974 ನೇ ಇಸವಿಯಲ್ಲಿ ಪಬ್ಲಿಷ್ ಮಾಡಿದ್ದೀರಿ. ಅಲ್ಲಿ ಹೋಗಿ ತಡವಾಗಲು ಕಾರಣವೇನು ಎಂದು ಕೇಳಿದ್ದಕ್ಕೆ, ಅವರಿಗೆ ಸಾಕಷ್ಟು ಸಿಬ್ಬಂದಿ ಇಲ್ಲವೆಂದು ಹೇಳತ್ತಾರೆ. ಸರಕಾರದವರು ಕಾಗದದ ತೀವ್ರ ಅಭಾವ ಕಾರಣ ಎಂದು ಹೇಳುತ್ತಾರೆ. ಕಾಗದದ ತೀವ್ರ ಅಭಾವ ನಿವಾರಿಸುವು ದಕ್ಕೆ ಮತ್ತು ಸಿಬ್ಬಂದಿ ಅನುಕೂಲತೆ ಮಾಡಿಕೊಡುವುದಕ್ಕೆ ಯಾವ ತರಹಕ್ಕಾದರೂ ತೆಗೆದುಕೊಳ್ಳುತ್ತೀರಿ?

† ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಮಾನ್ಯ ಅಧ್ಯಕ್ಷಣಿಯವರೇ, ಉತ್ತರವನ್ನು ಕೊಡ ತಕ್ಕ ಸಂದರ್ಭದಲ್ಲಿ, ಈ ಮೊದಲು 16 ದಿವಸದ ಕಾರ್ಯಕಲಾಪಗಳು ಬರುತ್ತಿದ್ದವು ಎಂದು ಹೇಳಿ ದ್ದೆವು. ಆದರಲ್ಲಿ ಇತ್ತೀಚೆಗೆ ಬಹಳಷ್ಟಕ್ಕೆ ಪ್ರಗತಿಯಾಗಿದೆ. 16 ದಿವಸಕ್ಕೆ ಬದಲು 20 ದಿವಸದ ಕಾರ್ಯಕಲಾಪಗಳನ್ನು ಒದಗಿಸಲಾಗಿದೆ. 30 ದಿವಸದ ಪ್ರೊವಿಡಿಂಗ್ಸ್ ಆಗ್ಬೇಕಾಗುತ್ತದೆ ಎಂದು ಹೇಳಿರುವುದು ಏನಿದೆ ಅದು 40 ದಿವಸಗಳವರೆಗೆ ಹೋಗಿದೆ. ಅದರಿಂದ ಒದಗಿಸಲು ಏರ್ಪಾಟಾ ಗುತ್ತಿರುವುದು 51 ದಿವಸ ಅಲ್ಲ, 37 ದಿವಸ. ಇದರ ಜೊತೆಗೆ (ಬ) ಪ್ರಶ್ನೆಗೆ ಉತ್ತರವಾಗಿ 1970—71 ರದ್ದು ಮಾತ್ರ ಈಗಾಗಲೇ ಪೂರ್ಣವಾಗಿ ಪಬ್ಲಿಷ್ ಆಗಿ ಮಾರಾಟಕ್ಕೆ ಇಟ್ಟಿದ್ದೇವೆ ಎಂದು ಹೇಳಿದ್ದೇವೆ. 1972 ನೇ ಇಸವಿಯದೂ ಕೂಡ ಪಬ್ಲಿಷ್ ಆಗಿದೆ. ಅದನ್ನೂ ಸಹ ಮಾರಾ ಟಕ್ಕೆ ಇಟ್ಟಿದ್ದೇವೆ. ಇನ್ನು 1973 ನೇ ಇಸವಿಗೆ ಸಂಬಂಧಪಟ್ಟದ್ದು ಏನಿದೆ ಅದನ್ನೂ ಕೂಡ ಈಗಾ ಗಲೇ ಆಕ್ಟ್ಸ್‌ಗಳನ್ನು ಕಾನೂನು ಇರಾಜಿಯವರಿಗೆ ಕಳುಹಿಸಿಕೊಟ್ಟಿದ್ದಾರೆ. ಸಿಬ್ಬಂದಿಯ ತೊಂದರೆ ಏನೂ ಇಲ್ಲ. ಆದರೆ, ಕಾಗದದ ತೊಂದರೆ ಇರತಕ್ಕದ್ದು. ನಾವು ಸುಮಾರು 525 ಮೆಟ್ರಿಕ್ ಟನ್ ಕಾದ ಕೊಡಬೇಕೆಂದು ಬೇಡಿಕೆಯನ್ನು ನಾಲ್ಕು ಕಂಪನಿಗಳಿಗೆ ಸಲ್ಲಿಸಿದ್ದೆವು. ಆದರೆ, ಕಳೆದ ಸಾಲನ್ನಲ್ಲಿ ಕೊಡಲಲ್ಲ. ಈ ಸಾರಿಯೂ ಕೂಡ 3,800 ಮೆಟ್ರಿಕ್ ಟನ್ ಕಾಗದ ಬೇಕಾಗಿದೆ. ಈ ಸಾರಿ 1,700 ಟನ್‌ಗೆ ಬೇಡಿಕೆಯನ್ನು ಡೈರೆಕ್ಟರ್ ಜನರಲ್ ಆಫ್ ಸಪ್ಲೈಸ್ ಅಂಡ್ ಡಿಸ್ಪೋಸಲ್ಸ್ ಅವರ ಮುಂದೆ ಇಟ್ಟಿದ್ದೇವೆ. ಮೈಸೂರು ಪೇಪರ್ ಮಿಲ್ಸ್ ಮತ್ತು ಮಂಡ್ಯ ನ್ಯಾಷನಲ್ ಪೇಪರ್ ಮಿಲ್ಸ್‌ನವರನ್ನು ಕೇಳಿದ್ದೇವೆ. 500 ಮೆಟ್ರಿಕ್ ಟನ್ ಕಾಗದವನ್ನು ಕೊಡಬೇಕೆಂದು ಕೇಳಿದ್ದೆವು. 150 ಟನ್ ಕೊಟ್ಟಿದ್ದರಿಂದ ಕಳೆದ ವರ್ಷ ಪ್ರಗತಿ ಮಾಡುವುದಕ್ಕೆ ಆಗಿಲ್ಲ. ಆದರೆ, ಈ ವರ್ಷ ನಮಗೆ ಹೆಚ್ಚಿನ ರೀತಿಯಲ್ಲಿ ಕಾಗದದ ಒಂದೇ ತೊಂದರೆ ಇರಕ್ಕಿದ್ದು. ಆದುದರಿಂದ, ಈ ಕೆಲಸವನ್ನು ಸರಿಯಾಗಿ ಮಾಡುವುದಕ್ಕೆ ಸಾಧ್ಯವಿದೆ.

ಶ್ರೀ ಬಿ. ಜಿ. ಬಣಕಾರ್.—ಮೈಸೂರು ಆಕ್ಟ್ಸ್, ರೂಲ್ಸ್ ಮತ್ತು ಆರ್ಡಿನೆನ್ಸ್ ಇವುಗಳನ್ನು ಪ್ರತ್ಯೇಕವಾಗಿ ಒಂದು ವಿಭಾಗ ಮಾಡಿ ನ್ಯಾಯವಾದ ಕಾಲಕ್ಕೆ ಶಾಸನಕರಿಗೆ ಅನುಕೂಲವಾಗು ವಂತೆ ಒಂದೇ ಪಾರ್ಟನ್ನು ಏಕೆ ಮಾಡಬಾರದು ? ಆ ರೀತಿ ಮಾಡಿಸಿಕೊಡಲಿಕ್ಕೆ ಆಶ್ವಾಸನೆಯನ್ನು ಕೊಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಆಶ್ವಾಸನೆಯನ್ನು ಕೊಡುವುದಿಲ್ಲ. ಇದು ಏನು ಇದೆ ಯೆನ್ನುವುದನ್ನು ಪರಿಶೀಲನೆ ಮಾಡೋಣ.

ಅಧ್ಯಕ್ಷರು.—ಇಲ್ಲಿಗೆ ಪ್ರಶ್ನೋತ್ತರಗಳು ಮುಗಿಯಿತು.